2. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ [ಉಪಾಧ್ಯಕ್ಷರು, ಹಾಗೂ ಅಧ್ಯಕ್ಷರು, ಅರ್ಜಿಗಳ ಸಮಿತಿ] ಮಾನ್ಯ ಅಧ್ಯಕ್ಷರೆ, ಗೌರಿಬಿದನೂರು ಟೌನ್ ಹೊರವಲಯದಲ್ಲಿ ಸರ್ಕಾರದವರು ಬೈಪಾಸ್ ರಸ್ತೆ ನಿರ್ಮಿಸಲು ವಶಪಡಿಸಿಕೊಂಡಿರುವ ಜಮೀನುಗಳಿಗೆ ಕೋರ್ಟ್ ಆದೇಶದಂತೆ ಹೆಚ್ಚುವರಿ ಹಣ ಬಿಡುಗಡೆ ಮಾಡುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಅರ್ಜಿ ಒಪ್ಪಿಸಲಾಯಿತು.

ಶ್ರೀ ಯಶವಂತರಾಯಗೌಡ ವಿ. ಪಾಟೀಲ್ (ಇಂಡಿ): ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ NRHM ಯೋಜನೆ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 650 ಗುತ್ತಿಗೆ ಆಯುಷ್ ವೈದ್ಯಾಧಿಕಾರಿಗಳ ವೇತನ ತಾರತಮ್ಯ ನಿವಾರಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಅರ್ಜಿ ಒಪ್ಪಿಸಲಾಯಿತು, ಇನ್ನು ಶೂನ್ಯ ವೇಳೆ.

3. ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅಧ್ಯಕ್ಷರು: ಚಲುರಾಯ ಸ್ವಾಮಿ, ಗೋವಿಂದ ಕಾರಜೋಳ, ಕೃಷ್ಣಾ ರೆಡ್ಡಿ, ನಾರಾಯಣ ಗೌಡ, ಇಲ್ಲ, ಪ್ರಸನ್ನ ಕುಮಾರ್ ರವರೆ ವಿಷಯ ಪ್ರಸ್ತಾಪಿಸಿ.

(1) **ವಿಷಯ:** ಸರ್ಕಾರಿ ಅತಿಥಿ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ಹಾಗೂ ವೇತನ ಹೆಚ್ಚಳ ಮಾಡುವ ಬಗ್ಗೆ.

ಶ್ರೀ ಕೆ.ಬಿ. ಪ್ರಸನ್ನ ಕುಮಾರ್ [ಶಿವಮೊಗ್ಗ]: ಸರ್ಕಾರಿ ಅತಿಥಿ ಉಪನ್ಯಾಸಕರುಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಅವರಿಗೆ ಸೇವಾ ಭದ್ರತೆ ಮತ್ತು ಸಂಬಳ ಕೂಡ ಸರಿಯಾಗಿ ಸಿಗುತ್ತಿಲ್ಲ, ಅದರ ಬಗ್ಗೆ ಸಚಿವರು ಉತ್ತರ ಕೊಡುವುದು.